# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಸಿ.ವಿ. ಕೃಷ್ಣಾರೆಡ್ಡಿ, ಹಿಂದಿನ ಕೃಷಿ ಅಧಿಕಾರಿ, ಶ್ರೀನಿವಾಸಪುರ ತಾಲ್ಲೂಕು, ಇವರು ಸುಜಲಾ ಜಲಾನಯನ ಯೋಜನೆ ಸಂಘಗಳಲ್ಲಿ ಹೆಮಟ ಹುಲ್ಲಿನ ಬೀಜ ಖರೀದಿ ಮಾಡುವಲ್ಲಿನ ಅವ್ಯವಹಾರದ ಬಗ್ಗೆ ಸಲ್ಲಿಸಿರುವ ಮೇಲ್ಮನವಿ.

**ಓದಲಾಗಿದೆ:**

1. ಯೋಜನಾ ನಿರ್ದೇಶಕರು, ಸುಜಲಾ ಜಲಾನಯನ ಯೋಜನೆ ಇವರ ಆದೇಶ ಸಂಖ್ಯೆ: ಸುಜಯೋ/ವಿಶ್ವಬ್ಯಾಂಕ್/ಆಡಳಿತ/ಕೋಲಾರ/ಹೆ.ಹು.ಬೀ./ತನಿಖ/05-06, ದಿನಾಂಕ: 25-06-2007.
2. ಶ್ರೀ ಸಿ.ವಿ. ಕೃಷ್ಣಾರೆಡ್ಡಿ, ಹಿಂದಿನ ಕೃಷಿ ಅಧಿಕಾರಿ, ಶ್ರೀನಿವಾಸಪುರ ತಾಲ್ಲೂಕು, ಇವರ ಮೇಲ್ಮನವಿಯ ದಿನಾಂಕ: 29-11-2010.
3. ಸರ್ಕಾರದ ಪತ್ರದ ಸಂ: ಕೃತೋಇ 79 ಕೃಪವಿ 2010. ದಿನಾಂಕ : 31-12-2010 ಮತ್ತು 07-06-2012.
4. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ ಇವರ ವರದಿ ದಿನಾಂಕ: 30-08-2011. ಮತ್ತು 21-11-2012.

*********

**ಪ್ರಸ್ತಾವನೆ:**

ಶ್ರೀ ಸಿ.ವಿ. ಕೃಷ್ಣಾರೆಡ್ಡಿ, ಕೃಷಿ ಅಧಿಕಾರಿ, ಇವರು ಈ ಹಿಂದೆ 2004-05 ರಿಂದ 2005-06ನೇ ಸಾಲಿನಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ, ಕೋಲಾರ ಜಿಲ್ಲೆಯಲ್ಲಿ ವಿಶ್ವಬ್ಯಾಂಕ್ ನೆರವಿನ ಸುಜಲಾ ಜಲಾನಯನ ಸಂಘಗಳಲ್ಲಿ ಹೆಮಟಾ ಹುಲ್ಲಿನ ಬೀಜಗಳನ್ನು ಖರೀದಿ ಮಾಡುವಲ್ಲಿ ವಿಶ್ವಬ್ಯಾಂಕಿನ ಸಂಗ್ರಹಣಾ ನಿಯಮಗಳನ್ನು ಅನುಸರಿಸದೇ ಇದ್ದ ಪ್ರಯುಕ್ತ ಸರ್ಕಾರಕ್ಕೆ ಉಂಟಾಗಿರುವ ನಷ್ಟದ ಹಣವನ್ನು ವಸೂಲಿ ಮಾಡುವ ಕುರಿತಂತೆ ಯೋಜನಾ ನಿರ್ದೇಶಕರು, ಸುಜಲಾ ಜಲಾನಯನ ಯೋಜನೆ ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ತಮ್ಮ ಆದೇಶದಲ್ಲಿ ಅಪಾದಿತ ಅಧಿಕಾರಿಗಳಾದ ಶ್ರೀ ಕೆ. ಜೆ. ದೇವೇಂದ್ರಪ್ಪ ಇವರಿಂದ ಸರ್ಕಾರಕ್ಕೆ ಉಂಟಾದ ನಷ್ಟ ರೂ. 1,54,000-00ಗಳಲ್ಲಿ ಶೇ. 10ರಷ್ಟನ್ನು ಅಂದರೆ ರೂ.15,400-00 ಗಳನ್ನು ಹಾಗೂ ಮತ್ತೊಬ್ಬರಾದ ಶ್ರೀ ಕೃಷ್ಣಾರೆಡ್ಡಿ, ಅಂದಿನ ಕೃಷಿ ಅಧಿಕಾರಿಗಳು ಇವರಿಂದ ಶೇಕಡ 40 ರಷ್ಟನ್ನು ಅಂದರೆ ರೂ. 61,600-00 ಗಳನ್ನು ಹಾಗೂ ಸರ್ಕಾರೇತರ ಸಂಸ್ಥೆಯ ಪದಾಧಿಕಾರಿಗಳಾದ ಇತರೆ 11 ಜನರಿಂದ ತಲಾ ರೂ. 7000-00 ರಂತೆ ಒಟ್ಟು ನಷ್ಟವಾದ ಮೊತ್ತದ ಶೇಕಡ 50ರಷ್ಟನ್ನು ವಸೂಲಿ ಮಾಡಲು ಆದೇಶಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಮನವಿಯಲ್ಲಿ ಸದರಿ ಪ್ರಕರಣದ ಆಪಾದಿತರಾದ ಶ್ರೀ ಸಿ.ವಿ. ಕೃಷ್ಣಾರೆಡ್ಡಿ, ಕೃಷಿ ಅಧಿಕಾರಿ, ಇವರು ತಮ್ಮಿಂದ ಸರ್ಕಾರಕ್ಕಾದ ನಷ್ಟ ರೂ.

102

61,600/-ಗಳನ್ನು ವಸೂಲು ಮಾಡುವಂತೆ ಆದೇಶಿಸಿರುವುದನ್ನು ಕೈಬಿಡಬೇಕೆಂದು ಮನವಿ ಸಲ್ಲಿಸಿರುತ್ತಾರೆ. ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ಸಿ.ವಿ. ಕೃಷ್ಟಾರೆಡ್ಡಿ, ಕೃಷಿ ಅಧಿಕಾರಿ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಮನವಿಯನ್ನು, ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಇವರಿಗೆ ಕಳುಹಿಸಿ ಸದರಿ ವಿಷಯವನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿ ನೀಡುವಂತೆ ಕೋರಲಾಗಿತ್ತು. ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆಯವರು ಈ ಕೆಳಕಂಡ ಅಂಶಗಳಂತೆ ಶ್ರೀ ಸಿ.ವಿ. ಕೃಷ್ಟಾರೆಡ್ಡಿ, ಕೃಷಿ ಅಧಿಕಾರಿ, ಇವರ ಮೇಲ್ಮನವಿಯನ್ನು ಪರಿಗಣಿಸದೆ ವಸೂಲಾತಿಗೆ ಆದೇಶಿಸಿರುವ ಮೊತ್ತ ರೂ. 61,600/-ಗಳನ್ನು ಸರ್ಕಾರಕ್ಕೆ ಜಮಾಮಾಡಲು ನಿರ್ದೇಶನ ನೀಡುವಂತೆ ತಮ್ಮ ವರದಿಯಲ್ಲಿ ಅಭಿಪ್ರಾಯ ಪಟ್ಟಿರುತ್ತಾರೆ.

(ಅ) ಸುಜಲಾದಲ್ಲಿ ನೀಲಟೂರು ಉಪ ಜಲಾನಯನ ಅಧೀನದಲ್ಲಿ 11 ಕಿರು ಜಲಾನಯನಗಳು ಇರುತ್ತವೆ. ಸದರಿ ಕಿರು ಜಲಾನಯನಕ್ಕೆ ಸ್ವಂತದೇ ಆದ ಕಾರ್ಯಕಾರಿ ಸಮಿತಿಯು ರೈತರ ವಂತಿಗೆ ಸಂಗ್ರಹಣೆ, ಕಾಮಗಾರಿ ಅನುಷ್ಠಾನ, ಅಂದಾಜು ಪತ್ರಿಕೆಗಳ ಅನುಮೋದನೆ, ಕಾಮಗಾರಿಗಳ ಅಳತೆ ತಪಾಸಣೆ ಇತ್ಯಾದಿಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳಿಗೆ ಪರಿಹಾರಗಳನ್ನು ನಡುವಳಿ ಪುಸ್ತಕಗಳಲ್ಲಿ ದಾಖಲಿಸುತ್ತಿದ್ದರು. ಸದರಿ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳ ಸೂಚನೆಗಳನ್ನು ಪಾಲಿಸುತ್ತಿದ್ದರು. ಅದರಂತೆ ಎಲ್ಲಾ ಕಿರು ಜಲಾನಯನಗಳಿಗೆ ಮಣ್ಣಿನ ಬದು ಕಾಮಗಾರಿಗಳ ಮೇಲೆ ಹೆಮಟಾ ಬೀಜ ಬಿತ್ತನೆ ಮಾಡಲು ಹೇಮಟಾ ಬೀಜ ಖರೀದಿಗೆ ಇಂಡೆಂಟ್‌ನ್ನು ಸಂಸ್ಥೆಯವರು ರಾಜ್ಯ ಸಹಕಾರ ಮಾರಾಟ ಮಹಾಮಂಡಳಿಗೆ ಕೊಟ್ಟಿರುತ್ತಾರೆ. ಅದರಂತೆ ಸದರಿ ಸಂಸ್ಥೆಯವರು ಪ್ರತಿ ಕಿರು ಜಲಾನಯನಕ್ಕೆ 1000 ಕೆ.ಜಿ. ಬೀಜಗಳನ್ನು ಸರಬರಾಜು ಮಾಡಿದ್ದು, ಪ್ರತಿ ಕೆ.ಜಿ. ರೂ.32/-ರಂತೆ ದರವನ್ನು ನಿಗದಿಪಡಿಸಿ ಒಟ್ಟು ರೂ. 32000/-ಗಳಿಗೆ ಕಾರ್ಯಕಾರಿ ಸಮಿತಿಗೆ ಬಿಲ್ಲನ್ನು ನೀಡಿರುತ್ತಾರೆ. ತದನಂತರ ಮೇಲಾಧಿಕಾರಿಗಳ ಸೂಚನೆಯಂತೆ ಸರಬರಾಜಾದ ಬೀಜದ ಮಾದರಿಗಳನ್ನು ಸದರಿ ಅಧಿಕಾರಿಯವರೇ ಬೀಜ ವಿಶ್ಲೇಷಣೆಗೆ ಹೆಬ್ಬಾಳ, ಪ್ರಯೋಗಾಲಯಕ್ಕೆ ಒಪ್ಪಿಸಿದ್ದು, ಸದರಿ ಫಲಿತಾಂಶ ಬಂದ ನಂತರ ಮೇಲಾಧಿಕಾರಿಗಳ ಸೂಚನೆಯಂತೆ ವಿಶ್ಲೇಷಣಾ ವರದಿಯಲ್ಲಿ ಬಳಕೆ

--3--

ಪ್ರಮಾಣ ಕಡಿಮೆ ಇದ್ದ ಕಾರಣ ಪ್ರತಿ ಕೆ.ಜಿ.ಗೆ ರೂ. 18/-ರಂತೆ ಮಾರಾಟ ಮಾಡಬಹುದೆಂದು ಉಪ ಜಲಾನಯನ ತಂಡದ ನಾಯಕರಿಗೆ ಪತ್ರ ನೀಡಿ ಸ್ವೀಕೃತಿಯನ್ನು ಸಹ ಪಡೆದಿರುತ್ತಾರೆ.

11 ಕಿರು ಜಲಾನಯನ ಸಮಿತಿಯವರು ಹೆಮಟಾ ಬೀಜಗಳನ್ನು ಸಮಿತಿಯ ನಿರ್ಣಯದಂತೆ 1.ಕೆ.ಜಿ.ಗೆ ರೂ. 32/-ರಂತೆ ಖರೀದಿ ಮಾಡಿ ಸಂಸ್ಥೆಗಳಿಗೆ ಪಾವತಿ ಮಾಡಿರುತ್ತಾರೆ. ಖರೀದಿ ಮಾಡುವುದಕ್ಕಿಂತ ಮುಂಚೆ ಹೆಮಟಾ ಹುಲ್ಲಿನ ಬೀಜಗಳನ್ನು ಮೊಳಕೆ ಪ್ರಮಾಣವನ್ನು ಬೀಜ ಪ್ರಯೋಗಾಲಯಲ್ಲಿ ಪರೀಕ್ಷಿಸಿ ಗುಣಮಟ್ಟವನ್ನು ಖಚಿತಪಡಿಸಿಕೊಂಡು ಅದರ ಆಧಾರದ ಮೇಲೆ ಹಣಪಾವತಿ ಮಾಡಬೇಕಾಗಿರುತ್ತದೆ. ಸುಜಲಾ ಜಲಾನಯನ ಸಂಘದವರು ದಿನಾಂಕ: 03-06-2005 ರಂದು ಹೆಮಟಾ ಹುಲ್ಲಿನ ಬೀಜ ಖರೀದಿ ಮಾಡಿ ಯಾವುದೇ ಮೊಳಕೆ ಪ್ರಮಾಣವನ್ನು ಪರೀಕ್ಷೆಗೆ ಒಳಪಡಿಸದೆ ಹಾಗೂ ಗುಣಮಟ್ಟ ಖಾತರಿಪಡಿಸಕೊಳ್ಳದೆ ರೈತರಿಗೆ ಹಂಚಿಕೆ ಮಾಡಲಾಗಿದೆ.

ಕೃಷಿ ಅಧಿಕಾರಿ, ಜಲಾನಯನ ಅಭಿವೃದ್ಧಿ ಇಲಾಖೆ, ಶ್ರೀನಿವಾಸಪುರ, ಇವರು ಸಂಘದಲ್ಲಿನ ಹೆಮಟಾ ಹುಲ್ಲಿನ ಬೀಜದ ದಾಸ್ತಾನಿನಿಂದ ಮಾದರಿಗಳನ್ನು ತೆಗೆದು ಬೀಜ ಪರೀಕ್ಷಾ ಪ್ರಯೋಗಾಲಯ, ಹೆಬ್ಬಾಳ, ಬೆಂಗಳೂರು, ಇವರಿಗೆ ಕಳುಹಿಸಿ ವಿಶ್ಲೇಷಣೆ ಮಾಡಿಸಿರುತ್ತಾರೆ. ಬೀಜ ಪರೀಕ್ಷೆ ಪ್ರಯೋಗಾಲಯದ ದಿನಾಂಕ: 25-07-2005ರ ಪ್ರಕಾರ ವರದಿಯಲ್ಲಿ ಲಾಟ್ ನಂ.ಸಿ.-145 ಶ್ರೀ ಪಿ. ತಿರುಪತಿರಾವ್, ಶ್ರೀ ಶ್ರೀನಿವಾಸ ಸೀಡ್ಸ್ ಮತ್ತು ರೂರಲ್ ಡೆವೆಲಪ್‌ಮೆಂಟ್ ಸೊಸೈಟಿ, ಪೆನಗೊಂಡ ಇವರು ಸರಬರಾಜುದಾರರೆಂದು ನಮೂದಿಸಲಾಗಿದೆ. ಆದರೆ ಬೀಜದ ಬೇಡಿಕೆ ಮತ್ತು ಇನ್‌ವಾಯ್ಸ್, ಕರ್ನಾಟಕ ರಾಜ್ಯ ಸಹಕಾರ ಮರಾಟ ಮಹಾ ಮಂಡಳಿಗೆ ನೀಡಿ ಬೀಜ ಖರೀದಿ ಮಾಡಲಾಗಿರುತ್ತದೆ. ಇದರಿಂದ ಇವರು ಖರೀದಿಯನ್ನು ಯಾರಿಂದ ಮಾಡಲಾಗಿದೆ. ಯಾವ ಸಂಸ್ಥೆಗೆ ಹಣ ನೀಡಲಾಗಿದೆ. ಬೀಜದ ಗುಣಮಟ್ಟ ಮತ್ತು ಮೊಳಕೆ ಪ್ರಮಾಣ ಪರೀಕ್ಷಿಸಲಾಗಿದೆಯೇ ಎಂಬುದನ್ನು ಪರೀಕ್ಷಿಸಿರುವುದಿಲ್ಲವೆಂದು ಸ್ಪಷ್ಟವಾಗಿ ದೃಡಪಟಿರುತ್ತದೆ.

(ಆ) ಹೆಮಟಾ ಬೀಜ ಖರೀದಿಯ ವ್ಯವಹಾರದಲ್ಲಿಯಾಗಲ್ಲಿ ಅಥವಾ ನಗದು ಪಾವತಿ ವಿಷಯದಲ್ಲಿಯಾಗಲಿ ನನ್ನದೇನು ಪಾತ್ರ ವಿರುವುದಿಲ್ಲವೆಂದು ಮತ್ತು ಅಂದಿನ ಅಪರ ಕೃಷಿ ನಿರ್ದೇಶಕರು, (ಜಾಗೃತ ದಳ ಕೋಶ) ಜಲಾನಯನ ಅಭಿವೃದ್ದಿ ಇಲಾಖೆ, ಬೆಂಗಳೂರು, ಇವರು ವರದಿ ಕೂಲಂಕಷವಾಗಿ ತನಿಖೆ ಮಾಡಿ ಉಪ ಜಲಾನಯನ ನಿರ್ವಹಿಸುವ ಖಾಸಗಿ ಸಂಸ್ಥೆಯದೆ ಪೂರ್ಣ ಜವಾಬ್ದಾರಿ ಎಂದು ವರದಿ ನೀಡಿರುವುದರಿಂದ ನನ್ನಿಂದ ವಸೂಲಾತಿಗೆ ಆದೇಶಿಸಿರುವುದರಿಂದ ರೂ. 61,600/- ಗಳನ್ನು ಕೈಬಿಡಲು ಕೋರಿರುತ್ತಾರೆ.

ಕೃಷಿ ಅಧಿಕಾರಿಗಳು ಉಪ ಜಲಾನಯನ ಮಟ್ಟದಲ್ಲಿ ಸಾಧಿಸಿದ ಪ್ರಗತಿಯನ್ನು ಸುಜಲ ಸಂಘಗಳ ಲೆಕ್ಕ ಪತ್ರಗಳ ನಿರ್ವಹಣೆಯಲ್ಲಿ ಹಾಗೂ ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡುವಲ್ಲಿ ಸೂಕ್ತ ತಾಂತ್ರಿಕ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ ನಡೆಸುವುದು ಅವರ ಕರ್ತವ್ಯ ಮತ್ತು ಜವಾಬ್ದಾರಿಯಾಗಿರುತ್ತದೆ. ಇವರು ಕಿರು ಜಲಾನಯನ ಸಂಘಗಳಿಗೆ ಸರಿಯಾದ ಮಾರ್ಗದರ್ಶನ ನೀಡಿದ್ದಲ್ಲಿ ಸರ್ಕಾರಕ್ಕೆ ಆಗುತ್ತಿದ್ದ ನಷ್ಟವನ್ನು ತಡೆಗಟ್ಟಬಹುದಾಗಿತ್ತು. ನಿಗದಿತ ಸಮಯಕ್ಕೆ ಸರಿಯಾಗಿ ಮಾರ್ಗದರ್ಶನ ನೀಡದಿರುವುದರಿಂದ ಇವರು ಸಹ ಸರ್ಕಾರಕ್ಕೆ ನಷ್ಟವುಂಟು ಮಾಡಲು ಸಹಕರಿಸಿದಂತಾಗುತ್ತದೆ. ಆದುದರಿಂದ ಇವರು ಸಲ್ಲಿಸಿರುವ ಮೇಲ್ಮನವಿಯನ್ನು ಪರಿಗಣಿಸದೆ ವಸೂಲಾತಿಗೆ ಆದೇಶಸಿರುವ ಮೊತ್ತ 61,600/-ಗಳನ್ನು ಸರ್ಕಾರಕ್ಕೆ ಜಮಾ ಮಾಡುವಂತೆ ನಿರ್ದೇಶನ ನೀಡಲು ಕೋರಿರುತ್ತಾರೆ.

ಆಯುಕ್ತರು ಜ.ಅ.ಇ. ರವರ ವರದಿಯಂತೆ ಕೃಷಿ ಅಧಿಕಾರಿಯಾದ ಶ್ರೀ ಸಿ.ವಿ. ಕೃಷ್ಣಾರೆಡ್ಡಿ ರವರಿಂದ ಸರ್ಕಾರಕ್ಕಾದ ನಷ್ಟದ ಮೊತ್ತ ರೂ. 61,600/-ಗಳನ್ನು ವಸೂಲು ಮಾಡುವ

ಬಗ್ಗೆ ಯೋಜನಾ ನಿರ್ದೇಶಕರು, ಸುಜಲಾ ಜಲಾನಯನ ಯೋಜನೆ ಇವರ ಆದೇಶವನ್ನು ಸ್ಥಿರೀಕರಿಸಿ, ಸದರಿಯವರ ಮೇಲ್ಮನವಿಯನ್ನು ತಿರಸ್ಕರಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 79 ಕೃಪವಿ 2010,**
**ಬೆಂಗಳೂರು, ದಿನಾಂಕ: 08-04-2013.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಸಿ.ವಿ. ಕೃಷ್ಣಾರೆಡ್ಡಿ, ಹಿಂದಿನ ಕೃಷಿ ಅಧಿಕಾರಿ, ಶ್ರೀನಿವಾಸಪುರ ತಾಲ್ಲೂಕು, ಇವರು ದಿನಾಂಕ: 29-11-2010 ರಂದು ಸರ್ಕಾರಕ್ಕೆ ಸಲ್ಲಿಸಿರುವ ಮೇಲ್ಮನವಿಯಲ್ಲಿ ಪರಿಗಣಿಸಬಹುದಾದಂತಹ ಯಾವುದೇ ಅಂಶಗಳು ಕಂಡು ಬರುವುದಿಲ್ಲವಾದ್ದರಿಂದ ಯೋಜನಾ ನಿರ್ದೇಶಕರು, ಸುಜಲಾ ಜಲಾನಯನ ಯೋಜನೆ ಇವರ ಆದೇಶವನ್ನು ಸ್ಥಿರೀಕರಿಸಿ, ಸದರಿ ಅಧಿಕಾರಿಗಳ ಮೇಲ್ಮನವಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ.

**ಇವರಿಗೆ:**

1. ಅಕೌಂಟ್ಸ್ ಆಫೀಸರ್, ಜಿಇ-5, ಮಹಾಲೇಖಪಾಲರ ಕಛೇರಿ, (ಲೆಕ್ಕ ಪತ್ರ ಮತ್ತು ಲೆಕ್ಕ ತಪಾಸಣೆ) ಹೊಸಕಟ್ಟಡ, ಬೆಂಗಳೂರು-1.
2. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ/ಕೃಷಿ ಇಲಾಖೆ, ಬೆಂಗಳೂರು.
3. ಯೋಜನಾ ನಿರ್ದೇಶಕರು, ಸುಜಲಾ ಜಲಾನಯನ ಯೋಜನೆ, ಕಾವೇರಿ ಭವನ, ಬೆಂಗಳೂರು.
4. ಸಂಬಂಧಪಟ್ಟ ಅಧಿಕಾರಿಗೆ (ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಇವರ ಮುಖಾಂತರ).
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
6. ಸರ್ಕಾರದ ಉಪ ಕಾರ್ಯದರ್ಶಿ-1, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.